SHORT NOTICE QUESTION AND ANSWER

POSTING ORDERS TO M.A.S. CLASS—I OFFICERS

2. SRI S. RUDRAPPA (Chitapur).—

Will the Chief Minister be pleased to state :—

(a) whether it is not a fact that about six M.A.S. Class—I Senior Scale Officers whose term of office as Administration, A.P.M.C. was over about more than a month back and three other have not been given posting order so far :

(b) whether Government is aware that the aforesaid officer are waiting for posting for more than month ?

SRI VEERENDRA PATIL (Chief Minister).—

(a) Of the 9 officers, 5 have been given postings. The other four will be appointed to suitable posts shortly.

(b) Yes.

ಶ್ರೀ ಎಸ್. ರುದ್ರಪ್ಪ —ಒಂಬತ್ತು ಅಧಿಕಾರಿಗಳ ಪೈಕಿ ಐದು ಮಂದಿಗೆ ಪೋಸ್ಟಿಂಗು ಆಗಿದೆ ಎಂದು ಹೇಳಿದ್ದೀರಿ, ಇನ್ನು ಉಳಿದ ನಾಲ್ಕು ಮಂದಿಗೆ ಏತಕ್ಕಾಗಿ ಪೋಸ್ಟಿಂಗು ಆರ್ಡರ್ ಕೊಟ್ಟಿಲ್ಲ ?

†ಶ್ರೀ ವೀರೇಂದ್ರ ಪಾಟೀಲ್ .—ಮೊದಲಿಗೆ ವೇಕೆನ್ಸೀಸ್‌ಗಳು ಇರಲಿಲ್ಲ. ಇಷ್ಟರಲ್ಲಿ ಈ ನಾಲ್ಕು ಮಂದಿಗೂ ಆರ್ಡರುಗಳನ್ನು ಕಳುಹಿಸಬೇಕೆಂದು ಪ್ರಯತ್ನಗಳು ನಡೆಯುತ್ತಿವೆ. ಇನ್ನು ಕೆಲವೇ ದಿವಸಗಳಲ್ಲಿ ಆರ್ಡರುಗಳನ್ನು ಕಳುಹಿಸಬಹುದು.

ಶ್ರೀ ಎಸ್. ರುದ್ರಪ್ಪ .—ಕೆಲವೇ ದಿನಗಳಲ್ಲಿ ಎಂದರೆ ಎಷ್ಟು ದಿನಗಳಲ್ಲಿ ಇವರ ಪೋಸ್ಟಿಂಗ್ ಬರಬಹುದು ? ಇದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್ ,—ಕೆಲವೇ ದಿವಸಗಳಲ್ಲಾಗಬಹುದು, ಇಲ್ಲವೇ ಕೆಲವು ವಾರಗಳಲ್ಲಿ ಆಗಬಹುದು. ತಿಂಗಳುಗಳಾಗುವುದಿಲ್ಲ. ಮೊದಲು ಇಂತಹ ಅಧಿಕಾರಿಗಳನ್ನು ಬಹುಶಃ ಅಗ್ರಿಕಲ್‌ಚರು ಮಾರ್ಕೆಟಿಂಗು ಕಮಿಟಿಯಲ್ಲಿ ಅಧಿಕಾರಿಗಳಾಗಿ ನೇಮಕ ಮಾಡಬೇಕೆಂದು ಇತ್ತು. ಇತ್ತೀಚೆಗೆ ಇಲ್ಲೆಲ್ಲಾ ಎಲೆಕ್ಟೆಡ್ ಕಮಿಟಿಗಳು ಬಂದುದರಿಂದ ಇವರನ್ನು ಇಲ್ಲಿ ರಿವರ್ಟ ಮಾಡಬೇಕು ಇಲ್ಲ ಬೇರೆ ವೇಕೆನ್ಸಿಗಳು ಇರುವ ಕಡೆಗೆ ವರ್ಗ ಮಾಡಬೇಕು. ರಿವರ್ಟ ಮಾಡಿದರೆ ಇವರಿಗೆ ತೊಂದರೆಯಾಗುತ್ತದೆ ಇದನ್ನು ತಪ್ಪಿಸಿ ಅನುಕೂಲ ಮಾಡಬೇಕೆಂದು ಇವರಿಗಾಗಿ ಬೇರೆ ಕಡೆ ಎಲ್ಲೆಲ್ಲಿ ವೇಕೆನ್ಸಿಗಳು ಇವೆ ಅದನ್ನು ನೋಡಿ ಕೊಂಡು ಅಲ್ಲಿಗೆ ಪೋಸ್ಟಿಂಗು ಆರ್ಡರು ಕೊಡಲು ಪ್ರಯತ್ನಗಳು ನಡೆಯುತ್ತಿವೆ. ಇವರಿಗೆ ಪೋಸ್ಟುಗಳು ಸಿಗದೇ ಇದ್ದರೆ ಇವರ ಪೋಸ್ಟನ್ನು ಆಫ್ ಗ್ರೇಡ್ ಮಾಡಿಯಾದರು ನೇಮಕ ಮಾಡಬೇಕೆಂದೂ ಇದೆ.

ಶ್ರೀ ಎಸ್. ರುದ್ರಪ್ಪ ,—ಈ ಗಾಗಲೇ ನಮ್ಮ ರೆವಿನ್ಯೂ ಸಕ್ರಟೇರಿಯಟ್‌ನಲ್ಲಿ ಡೆಪ್ಯುಟಿ ಸೆಕ್ರೆಟರಿ ಹುದ್ದೆ ಖಾಲಿ ಇದೆ. ಆಪ್ಟರ್ ಕೃಷ್ಣಪ್ರಾಜೆಕ್ಟ್‌ನಲ್ಲಿ ಡೆಪ್ಯುಟಿ ಕಮಿಷನರು ಹುದ್ದೆ ಖಾಲಿ ಇದೆ ಮತ್ತು ಭದ್ರಾವತಿಯಲ್ಲಿ ಕಮರ್ಷಿಯಲ್ ಮ್ಯಾನೇಜರ ಹುದ್ದೆ ಖಾಲಿ ಇದೆ. ಇಲ್ಲಿಗೇಕೆ ಇಂತಹ ಅಧಿಕಾರಿಗಳನ್ನು ಪೋಸ್ಟು ಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್ ;—ಈಗಾಗಲೇ ನಾನು ಆರಿಕೆ ಮಾಡಿಕೊಂಡೆ, ಇಲ್ಲಿರುವ ಅಧಿಕಾರಿಗಳನ್ನು ಎಲ್ಲಿಗೆ ನೇಮಕ ಮಾಡಬೇಕು ಎನ್ನುವ ಪ್ರಯತ್ನಗಳು ನಡೆಯುತ್ತಿವೆ. ಎಲ್ಲೆಲ್ಲಿ ವೇಕೆನ್ಸಿಗಳು ಇವೆಯೋ ಅದನ್ನು ನೋಡಿಕೊಂಡು ಅದಷ್ಟು ಜಾಗ್ರತೆ ಮಾಡಬೇಕೆಂದು ಇದ್ದೇವೆ.

ಶ್ರೀ ಎಸ್. ರುದ್ರಪ್ಪ .—ಪೋಸ್ಟಿಂಗ್‌ಗಾಗಿ ಇವರು ಈಗ ವೇಟ್ ಮಾಡುತ್ತಿರುವುದರಿಂದ ಇವರನ್ನು ಯಾವ ರೀತಿ ರಗ್ಯುಲರೈಸು ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್ .—ಬಹುಶಃ ಇವರು ಲೀವ್ ಮೇಲೆ ಇರಬಹುದು.

ಶ್ರೀ ಎಸ್. ರುದ್ರಪ್ಪ :—ಇವರು ರಜಾದಲ್ಲಿ ಇಲ್ಲ. ಎಲ್ಲರೂ ವೇಟಿಂಗ್ ಲಿಸ್ಟ್‌ನಲ್ಲಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್ :—ಇದನ್ನು ಇಪ್ಪೊತ್ತೇ ಇಲ್ಲಿ ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಇಷ್ಟು ಮಾತ್ರ ಇಲ್ಲಿ ಹೇಳಬಹುದು: ಈ ಅಧಿಕಾರಿಗಳನ್ನು ರಿವರ್ಟ್ ಮಾಡದೇ ಬೇರೆ ಕಡೆಗೆ ಪೋಸ್ಟಿಂಗು ಮಾಡಬೇಕೆಂದು ಇದೆ. ಇದಕ್ಕಾಗಿ ಮಾನ್ಯ ಸದಸ್ಯರು ಹೇಳಿದಂತೆ ಎಲ್ಲೆಲ್ಲಿ ವೇಕೆನ್ಸಿಗಳು ಇವೆಯೋ ಅವನ್ನು ನೋಡಿ ನೇಮಕ ಮಾಡಬೇಕಾಗುತ್ತದೆ. ಈಗಾಗಲೇ ಎಲ್ಲರನ್ನೂ ನೇಮಕ ಮಾಡಿಯಾಗಿದೆ. ಇನ್ನು ಒಂದೆರಡು ಜನರು ಮಾತ್ರ ಉಳಿದಿರಬಹುದು. ಇಂತಹವರಿಗೆ ಪೋಸ್ಟುಗಳು ಸಿಗದೇ ಇದ್ದರೆ ಇಂತಹ ಪೋಸ್ಟುಗಳನ್ನು ಆಫ್ ಗ್ರೆಡ್ ಮಾಡಿಯಾದರೂ ಆರ್ಡರು ಕಳುಹಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

ಅಧ್ಯಕ್ಷರು :—ಪ್ರಶ್ನೋತ್ತರ ವೇಳೆಯಾಯಿತು.

TACCAVI LOAN TO THE CULTIVATORS IN RAICHUR DISTRICT

356. SRI K SANGANGOUD (Lingsugur) : —

Will the Minister for Revenue be pleased to state :—

(*a*) the amount allotted to Raichur District, to advance to the cultivators as taccavi loans (Talukwise information be given) ;

(*b*) the extent of amount that has been distributed out of the above amount by the Tahsildars of each taluk ;

(*c*) whether any such amount is lying without distribution with Tahsildars, if so the reasons for not distributing the said amount ?

SRI H. V. KOUJALGI (Minister for Revenue) :—

(*a*) A Sum of Rs. 4·00 lakhs under '*b*—Land Improvement Loans (News Rules)' and Rs 1·00 lakh under '*c*—Takavi loans (New Rules)' has been allotted to Raichur district. Talukwise breakup is as follows :—